# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 25.02.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಖಾಸಗಿ ಸ್ವತ್ತುಗಳ ಮೇಲೆ ಅಳವಡಿಸಿರುವ ಜಾಹೀರಾತು ಫಲಕಗಳನ್ನು 2010-11ನೇ ಸಾಲಿಗೆ ನವೀಕರಿಸಲು ದಿನಾಂಕ: 29.06.2010 ರಂದು ಪಾಲಿಕೆಯ ಮಾಸಿಕ ಸಭೆಯಲ್ಲಿ ಸಭೆಯ ತೀರ್ಮಾನದಂತೆ ಸ್ಥಗಿತಗೊಳಿಸಲಾಗಿತ್ತು. ದಿನಾಂಕ: 29.12.2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಿರ್ಣಯದ ವಿಷಯ ಸಂಖ್ಯೆ: ಬಿ(145)2010-11 ರಲ್ಲಿ ಹಾಲಿ ಇರುವ ತೆರಿಗೆಯನ್ನು ಪಡೆದು ಎಲ್ಲಾ ಜಾಹೀರಾತುದಾರರಿಂದ ರೂ.20/- ಗಳ ಛಾಪಾಕಾಗದದಲ್ಲಿ ಒಂದು ಮುಚ್ಚಳಿಕೆ ಪಡೆದು, 2010-11ನೇ ಸಾಲಿಗೆ ಒಂದು ವರ್ಷಕ್ಕೆ ನವೀಕರಣ ಮಾಡಲು ತೀರ್ಮಾನಿಸಲಾಗಿರುತ್ತದೆ.

2010-11ನೇ ಸಾಲಿನ ಜಾಹೀರಾತು ಫಲಕಗಳನ್ನು 01.07.2010 ರಿಂದ 30.06.2011ರ ಒಂದು ವರ್ಷಕ್ಕೆ ಮಾತ್ರ ನವೀಕರಿಸಲಾಗುತ್ತದೆ ಮತ್ತು ಪ್ರತಿ ಜಾಹೀರಾತು ಫಲಕಗಳಲ್ಲಿ ಅನುಮತಿ ಅವಧಿ ಪ್ರಾರಂಭದ ದಿನಾಂಕ ಹಾಗೂ ಮುಕ್ತಾಯದ ದಿನಾಂಕಗಳನ್ನು, ಅನುಮತಿ ಸಂಖ್ಯೆಯನ್ನು, ಜಾಹೀರಾತುದಾರರ ಸಂಸ್ಥೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

ಜಾಹೀರಾತುದಾರರು ಈ ಬಗ್ಗೆ ಪಾಲಿಕೆಯೊಡನೆ ಸಹಕರಿಸಲು ಪಾಲಿಕೆಯ ಆಯುಕ್ತರು ಕೋರಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**